ಎನ್ನಿಸಿದಾಗ ಗರುಡನಿಗೆ ಆಫೀಸ್ ಇಲ್ಲದ ಈ ದಿನ ನಾನು ಮುಕ್ತ ಎನ್ನಿಸಿ ಮುದವಾಯ್ತು. ಒಬ್ಬ ಆರ್ಕಿಟೆಕ್ಟ್ ಇಂಜಿನಿಯರ್‌ನ ಆಫೀಸಿನಲ್ಲಿ ಅಕೌಂಟೆಂಟ್ ಅಂತ ಕೆಲಸ ಮಾಡುವ ಗರುಡನಿಗೆ ಆ ಇಂಜಿನಿಯರ್ ತನ್ನೆದುರು ಕೂತು ಪ್ಲಾನ್ ಪೇಪರ್ ಹರಡಿಕೊಂಡು ಬೆನ್‌ಸನ್ ಹೆಜಸ್ ಸಿಗರೇಟ್ ಹಚ್ಚುವಾಗೆಲ್ಲ 'ಥತ್ ರಾಜಾರೋಷವಾಗಿ ಸಿಗರೇಟ್ ಕೂಡಾ ಸೇದಲಾಗದ ನಾನೊಂದು ಮಹಾತ್ಮನ ಮರಿಯೋ' ಎಂದು ಬೇಸರವಾಗೋದಿದೆ. ಸುರುಳಿ ಸುರುಳಿಯಾಗಿ ಹೊಗೆಬಿಡುತ್ತಾ ಕೂತ ಗರುಡನಿಗೆ.

ರಫಿ ಯಾವಾಗಲೂ ಹೇಳುತ್ತಿದ್ದ... 'ಲೋ ಬದ್ಮಾಶ್ ಕೆ ಬಚ್ಚೆ, ಅಲ್ರಲೇ ಅದ್ಯಾವ ಸೀಮೆ ಮಡಿ, ಅದ್ಯಾವ ಜಗತ್ತಿನ ಸಿದ್ಧಾಂತ ನಿಮ್ದು? ದೊಡ್ಡದಾಗಿ ಅಡ್ಡ ವಿಭೂತಿ, ಮುದ್ರೆ ನಾಮ ಎಲ್ಲ ಹಾಕ್ಕೊಂಡು ಬಂದ ಈ ಗರುಡ ಕೂಡ ಈ ಸ್ಟೇಡಿಯಂ ಕಟ್ಟೆಮೇಲೆ ಸಿಗರೇಟ್ ಸೇದೋದು ನೋಡ್ರಲೇ.'

'ಲೋ ರಫಿ. ಅವನ ಹತ್ತಿರ ರೊಕ್ಕ ಅದೆ ಅದ್ಕೇ ಸಿಗರೇಟ್ ಸೇದ್ತಾನೆ, ನಮ್ದೇನಿದ್ರೂ ಗಣೇಶ್ ಬೀಡೀನೇ ಕಣ್ಲೇ' ಎಂದು ಐತಾಳ, ಜಾಗೀರ್ದಾರ ರೇಗಿಸಿದರೆ ರಫಿ ಯಾವತ್ತೂ ತನಗೆ ಹೂಂಗುಡುವ ನಾಣಿಯ ಎದುರು ಕೂತು ತನ್ನ ವಸಾಹತುಶಾಹಿ ನವ ಸಿದ್ಧಾಂತದ ಬಗ್ಗೆ ಬಡಬಡಿಸುತ್ತಿದ್ದ. ನಿನ್ನೆಗಳ ವರ್ತಮಾನ ಅದು. ಫಸ್ಟ್‌ಕ್ಲಾಸ್‌ನಲ್ಲಿ ಕನ್ನಡದಲ್ಲಿ ಎಂ.ಎ. ಮುಗಿಸಿದ ನಾಣಿ, ಬಿ.ಕಾಂ.ನಲ್ಲಿ ಸ್ವಲ್ಪದರಲ್ಲಿ ರ‍್ಯಾಂಕ್ ತಪ್ಪಿಸಿಕೊಂಡ ಗರುಡ, ಜರ್ನಲಿಸಂನಲ್ಲಿ ಎಂ.ಎ. ಮಾಡುತ್ತಿದ್ದ ಐತಾಳ, ಮೆಕ್ಯಾನಿಕಲ್ ಡಿಪ್ಲೋಮಾ ಮುಗಿಸಿ ಖಾಲಿ ಕುಳಿತ ಜಾಗೀರ್ದಾರ, ಭಾಳ ತಕ್ಲೀಫ್‌ನಿಂದ ಓದಿದರೂ ಮುಂದೆ ಏನೂ ಫಾಯದೆ ಇಲ್ಲ ಎಂಬ ಸುಜ್ಞಾನದಿಂದ ಪಿ.ಯು.ಸಿ.ಗೇ ನಿಲ್ಲಿಸಿದ ರಫಿ... ಎಲ್ಲ ಊರಲ್ಲೂ ಬಿಸಿಲಳ್ಳಿಯಂತಹುದೇ ಸ್ಟೇಡಿಯಂ, ಅಂತಹುದೇ ಕಟ್ಟೆಗೆ ಕೂಡುವ ಇಂತಹವೇ ಹುಡುಗರು ಇರಬಹುದೆಂಬ ಯೋಚನೆಯಿಂದ ಗರುಡನಿಗೆ ಕಸಿವಿಸಿ ಆಯ್ತು.

ಮೆದುಳೊಳಗೆ ಏಕಾಏಕಿ 'ವೀಣಾ ನಿನ್ನನ್ನು ಸಂಜೆ ಕಾಣ್ಬೇಕಂತೆ. ಏನೋ ಖಾಸ್ ಅಂತೆ, ನೀನೊಬ್ನೇ ಸಿಗ್ಬೇಕಂತೆ' ಅಂತ ರಫಿಯ ದನಿಯ ಮಾತು ರಿಂಗಣಿಸಿದ ಕೂಡಲೇ ಆ ನೆನಪಿನಲ್ಲಿ ಗರುಡನಿಗೆ ಎದೆಯ ಬಡಿತ ಜೋರಾದಂತೆ ಅನ್ನಿಸಿತು. ಈ ಸಂಜೆ ಸಿಕ್ಕರೆ ಏನು ಮಾತಾಡೋದು ವೀಣಾಳ ಹತ್ತಿರ? ಅವಳಿಗೆ ಮಾತನಾಡಲು ಅವಕಾಶವೇ ಕೊಡದೇ ತಾನೇ ಮಾತಾಡಿಬಿಡಬೇಕು. 'ನೋಡು ವೀಣಾ, ಮಾತಾಡೋದು ಏನೂ ಇಲ್ಲ ಅಂತ ತೀವ್ರವಾಗಿ ಅನ್ನಿಸಿದರೂ ನೀನು ರಫಿಯ ಹತ್ತಿರ ಹೇಳಿಕಳಿಸಿದ್ದೆಯಲ್ಲ ಅಂತ ಬಂದು ಕುಳಿತಿದ್ದೇನೆ ನಾನು. ಎಲ್ಲ ಮುಗಿದುಹೋದ ಮೇಲೆ ಮತ್ತೆಂತಹದು ಖಾಸ್ ಆಗಿ ಮಾತಾಡೋದು? ಕೇಳಿದರೆ ನೂರಲ್ಲ ಸಾವಿರ ಸಲ ಅದೇ ಮಾತು ಹೇಳ್ತೇನೆ ನಾನು... ನಿನ್ನ ಜೊತೆಯ ಈ ಹದಿನೈದು ವರ್ಷದ ಬೆಳವಣಿಗೆಯ ಬದುಕಲ್ಲಿ ಕಳೆದ ಹತ್ತು ವರ್ಷದಿಂದ ನಿನ್ನನ್ನು ಪ್ರೀತಿಸಿದ್ದೇನೆ ನಾನು. ತುಂಬಾ ಪ್ರಾಮಾಣಿಕನಾಗಿ ಪ್ರೀತಿಸಿದ್ದೇನೆ. ಹಾಗೆಂದು ನಿನ್ನೆದುರು ಹೇಳಿಕೊಂಡ ಕೂಡಲೇ ಅಸಂಗತವಾದೆ ನಿನಗೆ ನಾನು. ಯಾಕೆ ಹೇಳು? ನೀನೂ ನನ್ನ ಪ್ರೀತಿಸ್ತಿರಬಹುದು ಅಂತರ್ಯದಲ್ಲಿ... ಆದರೆ ನಿಂಗೆ ಮುಖ್ಯ ಆಗೋದು ನನ್ನ ನಿನ್ನೆಗಳಲ್ಲ ಸುಂದರ, ಸುಭದ್ರ ಸಾಧ್ಯತೆಯ ನಾಳೆಗಳು ಮಾತ್ರ. ಹೌದು, ನನಗೇ ಇಲ್ಲದ ಆ ನಾಳೆಗಳನ್ನ ಎಲ್ಲಿಂದ ತರಲಿ ಹೇಳು? ಅಂತಹುದೊಂದು ನಾಳೆಯ ಕಂತೆ ದಕ್ಕಲಿ, ನೀನೂ ದಕ್ಕಲಿ ಎಂದೇ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಓದಿ ಬಿ.ಕಾಂ. ಮುಗಿಸಿದೆ... ಆದರೆ... ನಿನ್ನ ಪಾಲಿಗೆ ಇದ್ಯಾವುದೂ ಸಾಧನೆ ಅಲ್ಲ ಬಿಡು. ನೀನು ತೀರಾ ಪ್ರಾಕ್ಟಿಕಲ್, ಅಷ್ಟೇಕೆ ಟೂ ಕ್ಯಾಲುಕುಲೇಟಿವ್ ಗರ್ಲ್. 'ಯಾರಲ್ಲಿ ಹೇಳು' ಅಂತ ನೀನು ಹೇಳಿಬಿಡ್ತಿ?!! ಥತ್... ಹೀಗೇ ಅಂತ ನಾಳೆಗಳ ಬಗ್ಗೆ ನನ್ನ ನಿನ್ನೆಗಳಿಗೆ ಗೊತ್ತಿದ್ದರೆ ಎದೆಯ ಆ ನಿನ್ನ ಮೂರ್ತ ಪ್ರತಿಮೆಗೆ ಅಗಾಧ ಹತ್ತು ವರ್ಷ ಪ್ರೀತಿಯ ಸುಧೆಯನ್ನ ಸುರಿಯುತ್ತಿರಲಿಲ್ಲ. ಆ ಅನುಭೂತಿಯೊಂದನ್ನ ಹೀಗೆ ದುರಂತವನ್ನಾಗಿ ಪರಿವರ್ತಿಸುತ್ತಿರಲಿಲ್ಲ...' ವಾಹ್! ಮನಸ್ಸಿನಲ್ಲಿ ಮಾತುಗಳು ಎಷ್ಟು ಕಲಾತ್ಮಕವಾಗಿ